ಇಂದು ದಿ:**17-11-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ಐ.ಕೆ ವಕೀಲರಿಂದ ಪ್ರತಿವಾದಿಗಳ ಪರಃ**

ನಾನು 5 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ಕಳೆದ 5 ವರ್ಷಗಳಿಂದ ಹರಿಹರದಲ್ಲಿ ವಾಸ ಇದ್ದೇನೆ ಎಂದರೆ ಸರಿ. ಪ್ರತಿವಾದಿ ಹೇಗೆ ಪರಿಚಯ ಎಂದರೆ ಸಾಕ್ಷಿ ಸಿರಿಗೇರಿ ಗ್ರಾಮದಲ್ಲಿ ಪಕ್ಕದ ಮನೆಯವರು ಎಂದು ಹೇಳುತ್ತಾರೆ. ವಾದಿ ಈ ದಾವೆಯನ್ನು ದಾವಾ ಆಸ್ತಿಗಳು ತನ್ನ ತಂದೆಯ ಆಸ್ತಿ ತನಗೆ ಬಂದಿದೆ ಎಂದು ಹೇಳಿ ಮಾಡಿದ್ದಾನೆ. ಈ ದಾವೆಯನ್ನು 3 ಆಸ್ತಿಗಳ ಕುರಿತು ಮಾಡಿದ್ದಾನೆ. ಒಂದೇ ಸರ್ವೆ ನಂಬರ್ ನಲ್ಲಿ 3 ಫೋಡ್‌ಗಳು ಆಗಿರುತ್ತವೆ. ಅದನ್ನು ಬಿಟ್ಟು ಇನ್ನೊಂದು ಜಮೀನು ಇರುತ್ತದೆ ಮತ್ತು ಒಂದು ಮನೆ ಇರುತ್ತದೆ. ದಾವಾ ಆಸ್ತಿಗಳು ವಾದಿಯ ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ. ವಾದಿ ತನ್ನ ಮಗ ದೊಡ್ಡಗೌಡ ಮತ್ತು ಪ್ರತಿವಾದಿಗೆ ಮಾಡಿಕೊಟ್ಟ ಹಕ್ಕು ಖುಲಾಸೆ ಪತ್ರದ ಬಗ್ಗೆ ನನಗೆ ಮಾಹಿತಿ ಇದೆ. 1982 ರ ಇಸವಿಯಲ್ಲಿ ಆಗಿರುತ್ತದೆ. ಸದರಿ ದಾಖಲೆ ನೊಂದಣಿ ಆಗಿರುತ್ತದೆ ಎಂದರೆ ಸರಿ. ಈ ಹಕ್ಕು ಖುಲಾಸೆ ಪತ್ರದಲ್ಲಿ ದಾವಾ ಆಸ್ತಿಗಳನ್ನು ವಾದಿ ತನ್ನ ಹೆಂಡತಿ ಮತ್ತು ಮಗನಿಗೆ ಬಿಟ್ಟುಕೊಟ್ಟಿದ್ದು ಮತ್ತು ಸ್ವಾಧೀನ ಸಹ ಕೊಟ್ಟಿದ್ದಾನೆ ಎಂದು ಉಲ್ಲೇಖ ಇದೆ ಎಂದರೆ ಸರಿಯಲ್ಲ. ಸದರಿ ಹಕ್ಕು ಖುಲಾಸೆ ಪತ್ರವನ್ನು ನಾನು ನೋಡಿಲ್ಲ. ನಿ.ಪಿ-9, ಹಕ್ಕು ಖುಲಾಸೆ ಪತ್ರದಲ್ಲಿ ಸ್ವಾಧೀನಕೊಟ್ಟ ಬಗ್ಗೆ ಮತ್ತು ಎಲ್ಲಾ ಆಸ್ತಿಗಳನ್ನು ಬಿಟ್ಟುಕೊಟ್ಟ ಬಗ್ಗೆ ನಮೂದು ಇದೆ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಹೆದರಿಸಿ ಬರೆಯಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ವಾದಿ ಈ ಹಕ್ಕು ಖುಲಾಸೆ ಪತ್ರದ ಸಾಕ್ಷಿದಾರರ ವಿರುದ್ಧ ಅಥವಾ ಪ್ರತಿವಾದಿಯ ವಿರುದ್ಧ ಹೆದರಿಸಿ ದಾಖಲೆ ಮಾಡಿಸಿಕೊಂಡಿದ್ದಾರೆ ಎಂದು

ಏನಾದರೂ ಪೋಲೀಸ್ ಪಿರ್ಯಾದಿ ಕೊಟ್ಟಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ವಾದಿ ಹುಟ್ಟಿ ಬೆಳೆದಿದ್ದು ತೋಟಗಂಟಿ ಗ್ರಾಮದಲ್ಲಿ. ತನ್ನ ಮಾವ ವೀರನಗೌಡ ಅಂದರೆ ಪ್ರತಿವಾದಿಯ ತಂದೆಯ ಮನೆಯಲ್ಲಿ ಇದ್ದನು. ಪ್ರತಿವಾದಿಯ ಜೊತೆಗೆ ಮದುವೆ ಆದ ನಂತರ, ಆತ ಸಿರಿಗೆರಿ ಗ್ರಾಮಕ್ಕೆ ಬಂದನು ಎಂದರೆ ಸರಿ. ವಾದಿಯ ತಾಯಿ ಆಕೆ ಜೀವಂತ ಇರುವವರೆಗೂ ಈ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದಳು ಎಂದರೆ ಸರಿಯಲ್ಲ. ಸಾಕ್ಷಿ ವೀರನಗೌಡ ನೋಡಿಕೊಳ್ಳುತ್ತಿದ್ದನು ಎಂದು ಹೇಳುತ್ತಾರೆ. ವೀರನಗೌಡ ನೋಡಿಕೊಳ್ಳುತ್ತಿದ್ದ ಎಂದು ತೋರಿಸಲು ಏನಾದರೂ ದಾಖಲೆ ಇವೆಯಾ ಎಂದರೆ ಸಾಕ್ಷಿ ಆತ ಮಾರಾಟ ಮಾಡಿದ್ದಾನೆ ಅದೇ ದಾಖಲೆ ಎಂದು ಹೇಳುತ್ತಾರೆ. ಸರ್ವೆ ನಂಬರ್ 257 ರಲ್ಲಿ ಆಸ್ತಿ ಮಾರಾಟ ಮಾಡಿರುತ್ತಾರೆ. 18 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ. ಯಾವ ಇಸವಿಯಲ್ಲಿ ಮಾರಿದ್ದಾರೆ ಎಂದು ನನಗೆ ನೆನಪಿಲ್ಲ. ಎನ್.ಜಿ ಮಲ್ಲನಗೌಡ ತಂದೆ ಸಿದ್ದನಗೌಡ ಎನ್ನುವವರಿಗೆ ಮಾರಾಟ ಮಾಡಿದ್ದಾರೆ. ಎಷ್ಟು ಮೊತ್ತಕ್ಕೆ ಮಾರಿದ್ದಾರೆ ಎಂದು ನೆನಪಿಲ್ಲ. ಈ 18 ಗುಂಟೆಯ ಕ್ರಯಪತ್ರವನ್ನು ನಾನು ನೋಡಿಲ್ಲ. ಯಾವ ಆಧಾರದ ಮೇಲೆ ವೀರನಗೌಡ ಮಾರಿದ್ದಾರೆ ಎಂದು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ದಾಖಲೆ ಇಲ್ಲ ಆದರೆ ನಾನು ನೋಡಿರುತ್ತೇನೆ ಎಂದು ಹೇಳುತ್ತಾರೆ. ನಾನು ಪಕ್ಕದ ಮನೆಯವನ್ನು ಇರುವ ಕಾರಣ, ವ್ಯಾಪಾರ ಈ ರೀತಿ ಆಯಿತು ಎಂದು ಗೊತ್ತಾಗಿರುತ್ತದೆ. ಈ ವಿಷಯವನ್ನು ನನ್ನ ಸಾಕ್ಷಿಪ್ರಮಾಣಪತ್ರದಲ್ಲಿ ತಿಳಿಸಿಲ್ಲ. ಈ 18 ಗುಂಟೆ ಮಾರಾಟ ಆಗುವ ಸಂದರ್ಭದಲ್ಲಿ ವಾದಿ ತೋಟಗಂಟಿ ಗ್ರಾಮದಲ್ಲಿ ಇದ್ದನು. ಈ 18 ಗುಂಟೆ ಮಾರಾಟ ಆಗುವ ಸಂದರ್ಭದಲ್ಲಿ ವಾದಿಯ ಮದುವೆ ಆಗಿ ಮಕ್ಕಳು ಸಹ ಇದ್ದರು

ಎಂದರೆ ಸರಿಯಲ್ಲ. ಯಾವ ವ್ಯಕ್ತಿಯ ಹೆಸರಿನಲ್ಲಿ ಪಹಣಿ ಇರುತ್ತದೆ ಅವರು ಮಾತ್ರ ಮಾರಾಟ ಮಾಡಬಹುದ ಎಂದರೆ ಸರಿಯಲ್ಲ. ಈ 18 ಗುಂಟೆ ವೀರನಗೌಡ ಇವನ ಹೆಸರಿಗೆ ಇದ್ದ ಬಗ್ಗೆ ಪಹಣಿ ನೋಡಿಲ್ಲ. ಈ 18 ಗುಂಟೆಯನ್ನು ಸ್ವತಃ ವಾದಿ ಮಲ್ಲನಗೌಡ ಎನ್ನುವವರಿಗೆ ಮಾರಾಟ ಮಾಡಿ, ಹಣಪಡೆದಿರುತ್ತಾನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ ನನಗೆ ಸಂಪೂರ್ಣ ಮಾಹಿತಿ ಇದ್ದರೂ, ವೀರನಗೌಡ ಮಾರಾಟ ಮಾಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಯಾವುದೇ ಆಸ್ತಿ ವ್ಯವಹಾರದಲ್ಲಿ ವೀರನಗೌಡ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ವಾದಿ, ಪ್ರತಿವಾದಿ, ಮೃತದೊಡ್ಡಗೌಡ ಮತ್ತು ಅವರ ಮಗಳು ಮಂಗಳಾ ಇವರದು ಒಟ್ಟು ಕುಟುಂಬ ಎಂದರೆ ಸರಿ. ನಾನು ಈ ದಾವೆಯಲ್ಲಿ ಅಲ್ಲದೇ ಇನ್ನೊಂದು ಪ್ರಕರಣದಲ್ಲಿ ಸಾಕ್ಷಿ ಹೇಳಿದ್ದೇನೆ. ನಾನು ಹಲವಾರು ಪ್ರಕರಣಗಳಲ್ಲಿ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ವಾದಿ ಎನ್.ಜಿ ಶಂಕರಪ್ಪ ಎನ್ನುವವರಿಗೆ ಕ್ರಯಪತ್ರ ಮಾಡಿಕೊಟ್ಟಿದ್ದು, ಅದಕ್ಕೆ ನೀವು ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನನಗೆ ಆ ವ್ಯವಹಾರದ ಬಗ್ಗೆ ಮಾಹಿತಿ ಇಲ್ಲ.

ಸಿರಿಗೇರಿ ಗ್ರಾಮದಲ್ಲಿ 2016 ರಲ್ಲಿ ಖುಷ್ಕಿ ಜಮೀನಿಗೆ ರೂ.1 ಲಕ್ಷ 40 ಸಾವಿರ ಮತ್ತು ನೀರಾವರಿ ಜಮೀನಿಗೆ ರೂ.2 ಲಕ್ಷದ 50 ಸಾವಿರ ಇತ್ತು ಎಂದರೆ ಸಾಕ್ಷಿ ಇರಬಹುದು, ಹೆಚ್ಚು ಕಡಿಮೆ ಆಗುತ್ತದೆ ಎಂದು ಹೇಳುತ್ತಾರೆ. ದಾವಾ ಜಮೀನುಗಳು ನೀರಾವರಿ ಜಮೀನುಗಳು ಎಂದರೆ ಸಾಕ್ಷಿ ಸರ್ವೆ ನಂಬರ್ 189 ಮಾತ್ರ ಎಂದು ಹೇಳುತ್ತಾರೆ. ಇನ್ನೊಂದು ಜಮೀನು ಒಣಬೇಸಾಯದ ಜಮೀನು ಇರುತ್ತದೆ ಎಂದು ಹೇಳುತ್ತಾರೆ. ಹಕ್ಕು ಖುಲಾಸೆ ಪತ್ರಕ್ಕೆ ಸಹಿ ಮಾಡಿದ ಕೆ.ಜಿ ಹನುಮಪ್ಪ ಸಿರಿಗೇರಿ ಗ್ರಾಮದವರು ಎಂದರೆ ಸರಿ. ನನಗೆ ದಾವಾ ಆಸ್ತಿಗಳ ಬಗ್ಗೆ ಮತ್ತು ವಾದಿಯ

ಮನೆ ತನದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ, ವಾದಿಯ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.